ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	383 (389)
ಸದಸ್ಯರ ಹೆಸರು	:	ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು	:	ಕಂದಾಯ ಸಚಿವರು
ಉತ್ತರಿಸುವ ದಿನಾಂಕ	:	15.09.2021

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆ ನಗರ ವ್ಯಾಪ್ತಿಯ ಜಿಲ್ಲಾ ಸಂಕೀರ್ಣ ಕಛೇರಿ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; (ವಿವರ ನೀಡುವುದು)	ಹೌದು ಬೀದರ್ ಜಿಲ್ಲೆಯ ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡ ನಿರ್ಮಿಸಲು ಬೀದರ್ ತಾಲ್ಲೂಕು ಚಿಕ್ಕಪೇಟೆ ಗ್ರಾಮದ ಸರ್ವೆ ನಂ.61-62ರ 22 ಎಕರೆ ಜಮೀನಿನಲ್ಲಿ ರೂ.48.28 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಸರ್ಕಾರದ ಆದೇಶ ಸಂಖ್ಯೆ:ಕಂಇ/91/ ಡಬ್ಲ್ಯೂಬಿಆರ್/2014, ದಿನಾಂಕ:24.012.2014 ರಂದು ಅನುಮೋದನೆ ನೀಡಲಾಗಿದೆ. ಮುಂದುವರೆದು, ದಿನಾಂಕ:18.12.2017ರ ತಿದ್ದುಪಡಿ ಆದೇಶದಲ್ಲಿ ಈ ಹಿಂದೆ ಗುರುತಿಸಿದ ಜಾಗದ ಬದಲಾಗಿ ಬೀದರ್ ಜಿಲ್ಲಾಧಿಕಾರಿ ಕಛೇರಿ ಮತ್ತುಸುತ್ತ-ಮುತ್ತಲಿನ ಕಛೇರಿಯನ್ನೊಳಗೊಂಡ 7 ಎಕರೆ ಪ್ರದೇಶದಲ್ಲಿ ನಿರ್ಮಿಸಲು ಅನುಮೋದನೆ ನೀಡಲಾಗಿದೆ. ಬೀದರ್ ಜಿಲ್ಲೆಯ ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡ ನಿರ್ಮಿಸಲು ಗುರುತಿಸಿದ್ದ ಸ್ಥಳದ ಬದಲಾಗಿ ಬೇರೆ ಜಮೀನಿನಲ್ಲಿ ನಿರ್ಮಿಸಲು ಸ್ಥಳ ಕಾಯ್ದಿರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.
ಆ)	ಕಳೆದ 7-8 ವರ್ಷಗಳ ಹಿಂದೆ ಸರ್ಕಾರ ಜಿಲ್ಲಾ ಸಂಕೀರ್ಣ ಕಾಮಗಾರಿಗೆ ಅನುದಾನ ಬಿಡುಗಡೆಯಾಗಿದ್ದರು, ಇನ್ನೂ ಕಾಮಗಾರಿ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;	
ಇ)	ಯಾವ ಕಾರಣದಿಂದಾಗಿ ಜಿಲ್ಲಾ ಸಂಕೀರ್ಣ ನೆನೆಗುದಿಗೆ ಬಿದ್ದಿದೆ? (ವಿವರ ನೀಡುವುದು)	

ಕಂಇ 103 ಡಬ್ಲ್ಯೂಬಿಆರ್ 2021

(ಆರ್. ಅಶೋಕ)
ಕಂದಾಯ ಸಚಿವರು.